# ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರದ ಸಚಿವಾಲಯ**
ವಿಧಾನಸೌಧ, ಬೆಂಗಳೂರು
ದಿನಾಂಕ : 11-12-2002

ಕ್ರ. ಸಿ.ಎಂ.ಡಬ್ಲ್ಯೂ.: 83: ಸಿಎಲ್ಎಂ: 2002

ಇಂದ,
ಪ್ರಧಾನ ಕಾರ್ಯದರ್ಶಿಗಳು,
ಸಹಕಾರ ಇಲಾಖೆ,
ಕರ್ನಾಟಕ ಸರ್ಕಾರ, ಬೆಂಗಳೂರು-560 001

ಇವರಿಗೆ,
ಸಹಕಾರ ಸಂಘಗಳ ನಿಬಂಧಕರು,
ಬೆಂಗಳೂರು

ಮಾನ್ಯರೇ,

**ವಿಷಯ** : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 43 (1) (ಸಿ) ರ ಮಾರಾಟಾಧಿಕಾರಿಗಳ ಅಧಿಕಾರವನ್ನು ಸೌಹಾರ್ದ ಕಾಯ್ದೆಯಡಿ ನೋಂದಣಿಯಾದ ಸಹಕಾರಿಗಳ ಅಧಿಕಾರಿಗಳಿಗೆ ಕೊಡುವ ಬಗ್ಗೆ

**ಉಲ್ಲೇಖ** : ತಮ್ಮ ಕಛೇರಿ ಪತ್ರ ಸಂಖ್ಯೆ: ಆರ್.ಎಸ್.ಆರ್. /ಸೌಕಾ/59/ಎಕ್ಸ್ಎಂ/002-03, ದಿನಾಂಕ: 06-8-2002

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ 1997ಕ್ಕೆ ನಿಯಮಗಳ ರಚನಾ ಕಾರ್ಯ ಪ್ರಗತಿಯಲ್ಲಿದ್ದು, ನಿಯಮಗಳ ಅನುಪಸ್ಥಿತಿಯಲ್ಲಿ ಹಾಗೂ ಸಹಕಾರ ಇಲಾಖೆಯಲ್ಲಿ ಕೆಳಹಂತದ ಸಿಬ್ಬಂದಿಯ ಕೊರತೆಯಿರುವುದರಿಂದ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ನೋಂದಣಿಯಾದ ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಮತ್ತು ಕೃಷಿಯೇತರ ಪತ್ತಿನ ಸಹಕಾರಿಗಳಲ್ಲಿ ಕಿರಿಯ ಸಹಾಯಕ ದರ್ಜೆ ಹಾಗೂ ಮೇಲ್ಪಟ್ಟು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 43(1)(ಸಿ) ಅಧಿಕಾರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟಂತೆ ನೀಡಲು ಸರ್ಕಾರದ ಅನುಮತಿ ನೀಡಲಾಗಿದೆಯೆಂದು ತಮಗೆ ತಿಳಿಸಲು ಆದೇಶಿತನಾಗಿದ್ದೇನೆ.

**ಷರತ್ತುಗಳು :**

1) ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ/ ಕೃಷಿಯೇತರ ಪತ್ತಿನ ಸಹಕಾರಿಗಳಲ್ಲಿ ಕಿರಿಯ ದರ್ಜೆ ಸಹಾಯಕರು ಹಾಗೂ ಮೇಲ್ಪಟ್ಟು ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಅಮಲ್ಜಾರಿ ಅರ್ಜಿಯನ್ನು ಜಾರಿ ಮಾಡುವ ಕಾರ್ಯ ನಿರ್ವಹಿಸತಕ್ಕದ್ದು.

2) ಅಮಲ್ಜಾರಿ ಕಾರ್ಯ ನಿರ್ವಹಿಸಬೇಕಾದ ಪಟ್ಟಣ ಬ್ಯಾಂಕುಗಳ/ ಕೃಷಿಯೇತರ ಪತ್ತಿನ ಸಹಕಾರಿಗಳ ಸಿಬ್ಬಂದಿಯ ಸೇವೆಯನ್ನು ಅಮಲ್ಜಾರಿಯ ಕಾರ್ಯಕ್ಕೆ ಸಂಬಂಧಿಸಿದಂತೆ ಕಾರ್ಯವ್ಯಾಪ್ತಿಯಲ್ಲಿರುವ ಸಂಬಂಧಪಟ್ಟ ನಿಬಂಧಕರ ನಿಯಂತ್ರಣ ನೀಡತಕ್ಕದ್ದು ಹಾಗೂ ಅಮಲ್ಜಾರಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ಟಿ.ಎ. ಮತ್ತು ಡಿ.ಎ. ಗಳನ್ನು ಸಂಸ್ಥೆಯ ವತಿಯಿಂದಲೇ ಭರಿಸುವುದಕ್ಕೆ ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಕೃಷಿಯೇತರ ಪತ್ತಿನ ಸಹಕಾರಿಗಳು ಒಪ್ಪಿಗೆ ನೀಡತಕ್ಕದ್ದು.

3) ಮೇಲ್ಕಂಡ ಸಿಬ್ಬಂದಿಯನ್ನು ಅಮಲ್ಜಾರಿ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಸದರಿಯವರು ನಿಬಂಧಕರ ಅಧೀನ ಅಧಿಕಾರಿಗಳೆಂದು ಪಟ್ಟಣ ಸಹಕಾರಿ ಬ್ಯಾಂಕುಗಳು/ ಕೃಷಿಯೇತರ ಪತ್ತಿನ ಸಹಕಾರಿಗಳು ನಿರ್ಣಯ ಮಾಡತಕ್ಕದ್ದು ಹಾಗೂ ಅಮಲ್ಜಾರಿಗೆ ಸಂಬಂಧಿಸಿದಂತೆ ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಕೃಷಿಯೇತರರ ಪತ್ತಿನ ಸಹಕಾರಿಗಳು ಯಾವುದೇ ಅಧಿಕಾರವನ್ನು ಚಲಾಯಿಸತಕ್ಕದ್ದಲ್ಲ.

4) ಪಟ್ಟಣ ಸಹಕಾರಿ ಬ್ಯಾಂಕುಗಳು/ ಕೃಷಿಯೇತರ ಪತ್ತಿನ ಸಹಕಾರಿಗಳು ತಮ್ಮ ವೃಂದ ಬಲದಲ್ಲಿ ವಸೂಲಾತಿಗೆ ಸಂಬಂಧಿಸಿದ ಕಾರ್ಯವನ್ನು ನಿರ್ವಹಿಸಲು ಸೂಕ್ತ ಹುದ್ದೆಗಳನ್ನು ಸೂಚಿಸತಕ್ಕದ್ದು.

ತಮ್ಮ ವಿಶ್ವಾಸಿ,
ಸಹಿ/-
**(ಆರ್.ಎಸ್. ಹುಚ್ಚಾಚಾರಿ)**
ವಿಶೇಷ ಕರ್ತವ್ಯಾಧಿಕಾರಿ
ಸಹಕಾರ ಇಲಾಖೆ